Doc-320
T.P-2

(1)

51st Year of Publication ★ SATYAVADI Daily, MYSORE 4

Reg No B G 155

17 - 6 - 1968

ಪತ್ರಮುಖೇನ ತಕ್ಕ ಮಾಹಿತಿಗಳಿಗೆ
ಆಕರ್ಷಣೀಯ ಲೇಖನಗಳಿಗೆ
ಧಾರ್ಮಿಕ ವಿಚಾರಗಳಿಗೆ
ಸತ್ಯವಾದಿ ದಿನಪತ್ರಿಕೆಯನ್ನು ತಪ್ಪದೆ ಓದಿ
ಅದರಲ್ಲಿ ಜಾಹಿರಾತನ್ನು ಪ್ರಕಟಿಸಿ

ಸ್ಥಳದಲ್ಲಿ ತಿಂಗಳಿಗೆ ಚಂದಾ 40 ಪೈಸೆ
ಅಂಚೆಯಿಚ್ಚೆ ಸೇರಿ ವರ್ಷಕ್ಕೆ ರೂ 16-00
ಸೋಮವಾರ ಸಂಚಿಕೆ ವರ್ಷಕ್ಕೆ ರೂ. 6



Space available

For Permanent Advertisement

ಸಂಪಾದಕರು : ತಿರುಮಲೆ ನರಸಿಂಹಾಚಾರ್ ಎಂ. ವಿ. ಶ್ರೀನಿವಾಸ ಪ್ರಕಾಶಕರು : ಧರ್ಮಪ್ರಚಾರನಿರತ ಎಂ. ಎಸ್. ಕೃಷ್ಣರಾವ್ [2 ಪೈಸೆ

ಭೂಕಂದಾಯ ವಜಾಕ್ಕಾಗಿ ಪಿ ಎಸ್ ಪಿ ಚಳವಳಿ !

"ಸತ್ಯವಾದಿ" ಯ ಸ್ವರ್ಣೋತ್ಸವ

"ಸತ್ಯವಾದಿ" ಯ ಸ್ವರ್ಣೋತ್ಸವವನ್ನು ಪ್ರತಿಪ್ರದೇಶದಲ್ಲೇ ನೆರವೇರಿಸಲಾಗುವುದು.

ರಾಷ್ಟ್ರಾಧ್ಯಕ್ಷರು, ಪ್ರಧಾನಿಯವರು, ಶ್ರೀಮನ್ಮಹಾರಾಜರು, ಮತ್ತಿತರ ಗಣ್ಯರು ಅಭಿನಂದಿಸಿ ಶುಭ ಕೋರಿರುವರು. ಶ್ರೀ ಶೃಂಗೇರಿ ಮತ್ತು ಶ್ರೀ ದ್ವಾರಕಾ ಜಗದ್ಗುರುಗಳವರು ಶುಭಾಶೀರ್ವಾದ ಮತ್ತು ಧನ ನೆರವು ಅನುಗ್ರಹಿಸಿರುವರು.

ಪತ್ರಿಕೆಗಳ ಸ್ವರ್ಣೋತ್ಸವವು ಅತಿ ವಿರಳ ಮತ್ತು ಮೈಸೂರು ರಾಜ್ಯದಲ್ಲಿ ನಡೆದಂತೆಯೇ ಇಲ್ಲ.

ಸ್ವರ್ಣೋತ್ಸವದ ಪೂರ್ಣ ಯಶಸ್ಸಿಗೆ ಶುಭ ಸಂದೇಶಗಳನ್ನೂ, ಧನಸೆರವನ್ನೂ ಆದರ ವಿಶ್ವಾಸಗಳಿಂದ ನೀಡಿ ಸಹಕರಿಸಬೇಕಾಗಿ ವಿನಂತಿಸಿ, ಈಡೇರುವೆದೆಂದು ಆಶಿಸಿ, ಕೃತಜ್ಞತಾಪೂರ್ವಕವಂದಿಸುತ್ತೇವೆ.

ಸಂಪಾದಕ ' ಸತ್ಯವಾದಿ '

ಚಾಮರಾಜಪುರಂ, ಮೈಸೂರು 4.

ಪುರಾತನ ವಿಚಾರಗಳು

ವಾರಣಾಸಿ— ಇಲ್ಲಿಗೆ 32 ಕಿಲೋಮಿಟರು ದೂರದ ಮಾರ್ಸೊ ವುರ ತನೆ ನಿವೇಶನದಲ್ಲಿ ಭೂಗರ್ಭಶೋಧನಾ ಇಲಾಖೆಯವರಿಂದ ಕಂಡುಹಿಡಿಯಲಾಗಿರುವ ವಿಚಾರಗಳು ಕ್ರಿ. ಪೂ. 600 ರಿಂದ ಕ್ರಿ.ಶ. ಮಧ್ಯಕಾಲದಲ್ಲಿನ ಜನರ ಸಮಾಜ.ರಾಜಕೀಯ ಮತ್ತು ಆರ್ಥಿಕ ಸ್ಥಿತಿಯನ್ನು ಹೊರಗೆಡವುತ್ತಿತೆ.

★

ಶ್ರಮದಾನ

ಪುತ್ತೂರಿನ ಮಹಶೋಬಾರ್ ಶ್ರೀ ಮಹಾಲಿಂಗೇಶ್ವರ ದೇವಸ್ಥಾನದ ಕೆರೆಯ ದುರಸ್ತಿ ಕೆಲಸವು ಊರವರ ಶ್ರಮದಾನದಿಂದ ಯಶಸ್ವಿಯಾಗಿ ನೆರವೇರಿತು.

ಆವರ ಗೋಳು ಇನ್ದೇ ಇನೆ

ನವದೆಹಲಿ— ಪಾಕಿಸ್ಥಾನದ ರಕ್ಷಣಾ ವ್ಯವಸ್ಥೆಯು 1965 ಕ್ಕಿಂತ ಹೆಚ್ಚು ಬಲಯುತವಾಗಿರುವುದೆಂದೂ, ಆದರೆ ಭಾರತವು ಯುದ್ಧಯಂತ್ರವನ್ನು ಹೆಚ್ಚುಗೊಳಿಸುತ್ತಿದ್ದು, ಕಾಶ್ಮೀರ ವಿಷಯ ವ್ಯವಸ್ಥೆ ಮಾಡಿಲ್ಲವಾದ್ದರಿಂದ, ಪಾಕಿಸ್ಥಾನದಲ್ಲಿ ತುರ್ತು ಪರಿಸ್ಥಿತಿ ತೆಗೆಯುವದಿಲ್ಲವೆಂದೂ ಪಾಕಿಸ್ಥಾನ್ ನ್ಯಾಷನಲ್ ಅಸೆಂಬ್ಲಿಯಲ್ಲಿ ತಿಳಿಸಲಾಯಿತು.

★

ಜನರ ಸಹಾಯಾರ್ಥ,

ನ್ಯೂಜ್ಲೀ ಮಹಿಳೆಯರ ಕೇಂದ್ರ ಸಂಸ್ಥೆ ಉದ್ಘಾಟನೆಗೆ ಶ್ರೀಮತಿ ಖಾಂಡೆಲ್ಲಾ ನೆಲರು ಜನರ ಪ್ರಯೋಜನಾರ್ಥ ಮತ್ತು ಹಿತಕ್ಕಾಗಿ ರೂ. 25000 ಚಕ್ಕು ಮತ್ತು 400 ಬಹುಮಾನ ಪೊಟ್ಟಣಗಳನ್ನು ಪ್ರಧಾನಿ ಇಂದಿರಾರವರಿಗೆ ಕೊಟ್ಟರು.

★

ಜಾಕ್‌ಪಾಟ್

ಬೆಂಗಳೂರು— ಭಾನುವಾರದ ಕುದುರೆ ಜೂಜಿನಲ್ಲಿ ಜಾಕ್‌ಪಾಟ್ ಪೂಲ್ ನಲ್ಲಿ ಒಂದೇ ಟಿಕೀಟಿಗೆ ರೂ. 107713 ದೊರೆಯಿತು.

★

ನೀರಿನ ಜಗಳದಲ್ಲಿ ಸಾವು

ಬೊಂಬಾಯಿ— ಮಜಗಾಂನಲ್ಲಿ ಒಂದು ನಿವಾಸದಲ್ಲಿ ನಲ್ಲೀನೀರು ತೆಗೆದುಕೊಳ್ಳುತ್ತಿದ್ದಾಗ ಪ್ರಸಿದ್ಧ ಹಾಕಿ ಆಟಗಾರ ಜೋಸೆಫ್‌ನ ತಾಯಿಗೂ ಫರ್ನಾಂಡಿಸ್ ಎಂಬಾತನ ಪತ್ನಿಗೂ ಹುಟ್ಟಿದ ಜಗಳದ ಪರಿಣಾಮವಾಗಿ ಜೋಸೆಫ್‌ನನ್ನು ಫರ್ನಾಂಡಿಸ್ ಚೂರಿಯಿಂದ ಇರಿದನು : ಜೋಸೆಫ್ ಆಸ್ಪತ್ರೆಯಲ್ಲಿ ಸತ್ತನು.

★

ಚೀಣಾ ಪದಾರ್ಥಗಳು

★

ನವದೆಹಲಿ— ಉತ್ತರ ಪ್ರದೇಶದ ಬಸ್ತಿ ಜಿಲ್ಲೆಯಲ್ಲಿ ಚೀಣಾದ ಅಕ್ರಮ ಸಾಗಾಣಿಕಾ ಪದಾರ್ಥಗಳು ಅತಿ ಕಡಮೆ ಬೆಲೆಗೆ ದೊರೆಯುತ್ತಿವೆ – ಚೀಣಾ ಪದಾರ್ಥಗಳನ್ನು ನೇಪಾಳ ಮೂಲಕ ಅಕ್ರಮವಾಗಿ ಸಾಗಿಸಲ್ಪಡುವವು – ರೂ. 300–350 ರ ಭಾರತ ಟ್ರಾನ್ಸಿಸ್ಟರ್‌ನಂಥ ಚೀಣಿಯವು ರೂ. 100–150 ಕ್ಕೆ ದೊರೆಯುವವು ; ರೂ. 4.50 ರ ಟೂತ್ ಪೇಸ್ಟು ರೂ. 1.50 ಕ್ಕೆ ಸಿಕ್ಕುತ್ತಿದೆ ; ಬೂಟ್‌ಪಾಲಿಷ್ 50 ಪೈಸೆಗೆ ಸಿಕ್ಕುತ್ತಿದೆ ; ಹೆಚ್ ಎಂ ಟಿ ಗಡಿಯಾರಗಳಿಗೆ ಕೇಳಿಕೆ ಇಲ್ಲ, ಅಂತಹ ಚೀಣಾ ಗಡಿಯಾರಗಳು ರೂ. 50–60 ಕ್ಕೆ ಸಿಕ್ಕುತ್ತವೆ ರೂ. 100–150 ಬಾಳುವ ಹರಳು ಹಾಕಿದ ಉಂಗುರಗಳು ರೂ. 8 ಕ್ಕೆ ದೊರೆಯುತ್ತವೆ ; ಚೀಣಾ ಟಿರ್ಲಿ ಪರಟುಗಳು ಅತಿ ಅಗ್ಗದಲ್ಲಿ ಸಿಕ್ಕುತ್ತವಂತೆ !

ಉಪಾಧ್ಯಾಯರ ಚಳುವಳಿ

ಹೈದರಾಬಾದು— 1967 ನೇ ಮೇ 1 ರ ನಂತರ ಕೆಲಸಕ್ಕೆ ತೆಗೆದುಕೊಳ್ಳಲಾದ ಉಪಾಧ್ಯಾಯರುಗಳನ್ನು ತೆಗೆದುಹಾಕುವ ' ಸ್ವಚ್ಛಂದ ಆಜ್ಞೆ ' ವಿರುದ್ಧ ತೆಲಂಗಾಣದಾದ್ಯಂತ 30000 ಉಪಾಧ್ಯಾಯರು ಇಂದು ' ವ್ಯಂಟಿ ರಿರ್ಟಂಜ್ ಡೆ ' ಆಚರಿಸಲಿರುವರು.

★

ಶ್ರೀ ಕೃಷ್ಣ ಧರ್ಮಛತ್ರ

ಉಡುಪಿ— ಶ್ರೀ ಕೃಷ್ಣಮಠ ರಾಜಾಂಗಣದಲ್ಲಿ ಸುಮಾರು ರೂ. 1 ಲಕ್ಷ ಖರ್ಚಿನಲ್ಲಿ ಕಟ್ಟಲಾಗಿರುವ ಶ್ರೀ ಕೃಷ್ಣ ಧರ್ಮಛತ್ರದ ಉದ್ಘಾಟನೆಯು ಶ್ರೀ ಪುತ್ತಿಗೆ ಮಠಾಧೀಶರಿಂದ ನೆರವೇರಿತು.

ಭೂಕಂದಾಯ ವಜಾ ಆಗಬೇಕು

ಬೆಂಗಳೂರು— ಪ್ರಜಾ ಸೋಷಲಿಸ್ಟ್ ಪಾರ್ಟಿಯ ಕರ್ನಾಟಕ ಶಾಖೆಯು ರಾಜ್ಯದಲ್ಲಿ ಭೂಕಂದಾಯ ವಜಾ ಆಗಬೇಕೆಂದೂ ತಪ್ಪಿದರೆ ರಾಜ್ಯಾದ್ಯಂತ ಚಳವಳ ಹೂಡಲೂ ನಿರ್ಧರಿಸಿದೆ.

●

ಇರುವೆಗಳಿಂದ ಸಾವು

ಕೊಲಂಬೊ— ವಾಧುವಾ ಗ್ರಾಮದಲ್ಲಿ ಒಬ್ಬಾತನು ತನ್ನ ಮನೆ ವರಾಂಡಾದಲ್ಲಿ ಮಲಗಿದ್ದಾಗ ಇರುವೆಗಳ ಕಡಿತದಿಂದ ಸತ್ತನು ; ರಕ್ತಮಡುವಿನಲ್ಲಿ ಬಿದ್ದಿದ್ದ ಇವನ ಮೈತುಂಬಾ ಇರುವೆ ಮುತ್ತಿದ್ದವು.

★

ಕೊಲೆ ಪ್ರಯತ್ನ

ರಾವಲ್ಪಿಂಡಿ— ಪಾಕಿಸ್ಥಾನ ಕಾಶ್ಮೀರ ಅಸೆಂಬ್ಲಿಯ ಸದಸ್ಯರಾದ ಭಾವಲ್ಪುರದ ಎಮ್ಮಾರರ ಮೇಲೆ ಗುಂಡುಹಾರಿಸಲಾಯಿತೆಂದೂ, ಪ್ರಾಣಾಪಾಯವಾಗದೆ ಕೆರಿಯ ಗುಂಡಿನ ಗಾಯಗಳಾಗಿ ಆಸ್ಪತ್ರೆಗೆ ಸಾಗಿಸಲ್ಪಟ್ಟು ಆಪರೇಷನ್ ನಂತರ ಬಿಡಲ್ಪಟ್ಟರು

★

ನಾಲ್ಕು ಅನಾಹುತಗಳು

ಕಲ್ಲೀಕೋಟೆ— ಫರೋಕಿನ ಒಂದೇ ಸ್ಥಳದಲ್ಲಿ ಶುಕ್ರವಾರ ಒಂದರ ನಂತರ ಒಂದರಂತೆ ನಾಲ್ಕು ವಾಹನ ಅನಾಹುತಗಳಾದವು.

★

ಚೀಣಾದ ಟೀಕೆ

ಟೋಕಿಯೊ— ಪರಮಾಣು ಸಂಬಂಧದ ಒಪ್ಪಂದವು ಅಮೇರಿಕಾ–ರಷ್ಯಾ ಸ್ಥಾಪಿಸಿರುವ ದೊಡ್ಡ ಮೋಸವಾ ಎಂದು ಚೀಣಾ ಟೀಕಿಸಿದೆ.

(2)

ಭಕ್ತ ತುಳಸೀದಾಸ

(ಮುಂದುವರಿದುದು)

ಒಂದು ದಿವಸ ತುಳಸೀದಾಸನ ಪತ್ನಿ ಪಕ್ಕದ ಗ್ರಾಮದಲ್ಲಿದ್ದ ತನ್ನ ತಂದೆಯ ಮನೆಗೆ ಹೋಗಬೇಕಾಯಿತು. ತನ್ನನ್ನು ಒಂದು ದಿನದ ಮಟ್ಟಿಗಾದರೂ ಬಿಟ್ಟಿರಬೇಕೆಂದೂ, ತನ್ನನ್ನು ಬಿಟ್ಟಿರಬೇಕೆಂದೂ, ತನ್ನನ್ನು ಪೀಡಿಸಬಾರದೆಂದೂ ತುಳಸೀದಾಸನನ್ನು ಆಕೆ ಬೇಡಿಕೊಂಡಳು. ತುಳಸೀದಾಸನು ತಕ್ಷಣವು ಜೊತೆ ಬರುವುದಿಲ್ಲವೆಂದು ವಾಗ್ದಾನ ಮಾಡಿದನು. ಆದರೆ ಅವಳು ತಂದೆ ಮನೆಗೆ ಒಂದು ಪಲ್ಲಕ್ಕಿಯಲ್ಲಿ ಹೊರಟೊಡನೇ, ತಾಳಲಾರದ ತಾಪದಿಂದ ಸುತ್ತಿದ್ದು, ದೊಡ್ಡ ಜ್ವಾಲೆಯಾಗಿ ಅವನ ಸರ್ವಾವಯವವನ್ನು ದಹಿಸಿತು. ಕಣ್ಣು ಮುಚ್ಚಿ ಬಿಡುವದರೊಳಗೆ, ತುಳಸೀದಾಸನು ತನ್ನ ಮಾನಸವನ್ನು ಹೆಡತಿ ಅಲ್ಲಿಗೆ ಬರುವದಕ್ಕೆ ಅರ್ಧ ಗಂಟೆ ಮುಂಚೆಯೇ ಬಾಗಿಲಲ್ಲಿ ನಿಂತ.

ತನ್ನ ಗಂಡನು ಬಾಗಿಲಲ್ಲಿ ನಿಂತಿದ್ದುದನ್ನು ಕಂಡು, ಅವಳಿಗೆ ತಡೆಯಲಾರದಷ್ಟು ಕೋಪಗೊಂಡು, ನಿರಂತರ ವೇದನೆಯಿಂದ "ಧಿಕ್ಕಾರ, ಧಿಕ್ಕಾರ! ನಿನ್ನ ಮುಖದಲ್ಲಿ ಎಂಥ ಸಂಕೋಚವಿಲ್ಲವೆ! ಹುಚ್ಚ, ಹುಚ್ಚ, ಶುದ್ಧ ಹುಚ್ಚ! ಒಬ್ಬ ಸ್ತ್ರೀಯ ಏನು— ಚರ್ಮ ಮೂಳೆ ಕೊಳಕು ತುಂಬಿದ ಒಂದು ಗೂಡು! ಈ ಅನ್ಯಾಯದ ವ್ಯಾಮೋಹದಲ್ಲಿ ನೂರನೇ ಒಂದು ಭಾಗದಷ್ಟಾದರೂ, ಶ್ರೀ ರಾಮಚಂದ್ರನ ಪವಿತ್ರ ಪಾದಗಳ ಕಡೆ ತಿರುಗಿಸಿದರೆ, ನಿನಗೆ ಚಿರಶಾಂತಿ ಮುಕ್ತಿ ತಂದುಕೊಡುವದು" ಎಂದು ಅರುಚಿದಳು.

ಭಗವಂತನ ದಯೆಯಿಂದ ಈ ಕ್ರೋಧಾವೇಶದ ತೀಕ್ಷ್ಣ ಮಾತು ಅವನ ಹೃದಯಕ್ಕೆ ನಾಟಿತು. ಈ ಮಾತುಗಳ ಸಿಡಿಲು ತುಳಸೀದಾಸನ ಮನದ ಕಣ್ಣುಗಳ ಮುಂದೆ ಹೊಳೆದು, ಕುರುಡು ವ್ಯಾಮೋಹವನ್ನು ಓಡಿಸಿತು. [ಸಶೇಷ]

SHAKTI

SUDHA

A Superb Tonic



ಗೋರಕ್ಷಣೆ ಮತ್ತು ಪ್ರಾಣಿದಯಾ ಕಾರ್ಯಗಳು ಹೆಚ್ಚೆ ಚ್ಚಾಗಿ ನಡೆಯಲಿ

Cow Slaughter should be banned Immediately

ವುಡ್‌ಲಾಂಡ್ಸ್ ಜನವರಿಯ 7ನೇ ವಾರ

.... ಸುಬೋಧ್ ಮುಖರ್ಜಿಯವರ ಈಸ್ಟ್‌ಮನ್ ಕಲರ್ ಹಿಂದಿ ಚಿತ್ರ ....

ಷಾಗಿರ್ದ್ Shagird

ತಾರಾಗಣ— ಜಾಯ್ ಮುಖರ್ಜಿ, ಸೈರಾಬಾನು, ನಾಜಿಶ್ ಪುರೀ
ಅಜ್ಜೆಲ ಸಹದೇವ್, ಐ. ಎಸ್. ಜೋಹರ್ [ದಿವಸ ಪ್ರದರ್ಶನ]

ಆಪೇರ— 14—6—68 ರಿಂದ

ಪದ್ಮಿನಿ ಪಿಕ್ಚರ್ಸ್‌ರವರ

ಕೆತೂರು ಚೆನ್ನಮ್ಮ

ಕನ್ನಡ

ನಿರ್ಮಾಪಕ, ನಿರ್ದೇಶನ : ಬಿ. ಆರ್. ಪಂತುಲು

Help The Gorakshana

ಗೋರಕ್ಷಣಕ್ಕೆ ಬೆಂಬಲ ನೀಡಿ

— ಗೋರಕ್ಷಣೆ ವ್ಯವಸ್ಥಾಪಕರು ವಿನಂತಿ —

ಗೋರಕ್ಷಣಕ್ಕೆ ಲೇಖನಗಳನ್ನೂ ಪ್ರೋತ್ಸಾಹ ಧನವನ್ನೂ
ವಂದನಾಪೂರ್ವಕವಾಗಿ ಸ್ವೀಕರಿಸಲಾಗುವುದು

ಚಂದಾವಾಯಿದೆ ಕಳೆದಿರುವವರು ಇನ್ನಷ್ಟು ಚಂದಾ ಪಾವತಿಮಾಡಬೇಕಾಗಿ ವಿನಂತಿ

ಡಾ|| ಪಿ ಎಸ್ ನಾರಾಯಣ್, ಶ್ರೀ ಪಿಎಸ ವಿಶ್ವನಾಥ್ ಜಯನಗರ ಬೆಂಗಳೂರು
ಶ್ರೀ ಬಿ ಜಿ. ಶಾಸ್ತ್ರಿಗಳು, 1030 ವಿದ್ಯಾರಣ್ಯಪುರಂ, ಮೈಸೂರು
ಶ್ರೀ ಅಸಂತನಂಸಿಂಹಯ್ಯಂಗಾರ್, ಶಾಸ್ತ್ರಧರ್ಮಪ್ರಚಾರಸಭಾ ಹೊಂಗನೂರು
ಗೋರಕ್ಷಣ ಆಫೀಸು ಸತ್ಯವಾದಿ ಪ್ರೆಸ್ ಚಾಮರಾಜಪುರಂ, ಮೈಸೂರು 4

ವಿಳಾಸ— ಗೋರಕ್ಷಣ ಆಫೀಸು 1067 ಚಾಮರಾಜಪುರಂ, ಮೈಸೂರು.

Golden Jubilee of 'Satyavadi'

The golden jubilee of the 'Satyavadi' is to be celebrated very soon.

The President, the Prime Minister, H H. the Maharaja of Mysore, and other personages have extended messages of felicitations and good wishes. Sri Sringeri and Sri Dwaraka Jagadgurujis have favoured blessings and financial aid.

It is welknown that golden jubilee of newspapers in India is rare and almost unknown in Mysore state. The Prime Minister has expressed that it is no small achievement.

Hearty cooperation, extending of messages and donations and gracing the occasion with presence, are fervently solicited with grateful thanks.

Editor, 'Satyavadi' Chamarajapuram, Mysore 4.

Edited, Printed & Published by Dharmapracharn Nirata M S Krishna Rao (Proprietor) at the Satyavadi Press Chamarrajpuram, Mysoe 4